## ನಿಮ್ಮೊಡನೆ

# ಮಾತೃಭಾಷೆ ಆಡಬಾರದೆ?

ಪ್ರಾಥಮಿಕ ಹಂತದಲ್ಲಿ ಎಳೆಯ ಮಕ್ಕಳು ತಮ್ಮ ತಮ್ಮಲ್ಲಿ ಮಾತೃಭಾಷೆಯಲ್ಲಿ ವ್ಯವಹರಿಸುವುದಕ್ಕೆ ಶಾಲಾ ಆಡಳಿತ ಮಂಡಲಿಗಳು ಶಿಕ್ಷೆ ವಿಧಿಸುತ್ತಿರುವ ವರದಿಗಳು ಸಂಸತ್ ಸದಸ್ಯರನ್ನು ಕೆರಳಿಸಿವೆ. ಇಂಥ ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಅನುಮತಿಯನ್ನು ರದ್ದು ಪಡಿಸಬಾರದೇಕೆ ಎಂಬ ಪ್ರಶ್ನೆಯೂ ಈ ಸಂದರ್ಭದಲ್ಲಿ ಎದ್ದಿದೆ.

ಅಪರೂಪಕ್ಕೆ ನಮ್ಮ ಜನಪ್ರತಿನಿಧಿಗಳು ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ವ್ಯವಸ್ಥೆಯ ಕುರಿತಾಗಿ ಸಂಸತ್ತಿನಲ್ಲಿ ವಾಸ್ತವ ಸಂಗತಿಗಳನ್ನು ಚರ್ಚಿಸಿದ್ದಾರೆ. ಶಿಕ್ಷಕರ ತರಬೇತಿಗೆ ಸಂಬಂಧಿಸಿದ ಪ್ರಸ್ತಾವದಲ್ಲಿ ವ್ಯಕ್ತವಾದ ಅನಿಸಿಕೆಗಳು ಈಗಿನ ಶಿಕ್ಷಣ ವ್ಯವಸ್ಥೆಯ ಬಗ್ಗೆ ಬೆಳಕು ಚೆಲ್ಲುವಂತೆ ಆಗಿರುವುದು ವಿಶೇಷ ಸಂಗತಿ. ಸಂಸತ್ತಿನಲ್ಲಿ ಮಾತನಾಡಿದ ಸದಸ್ಯರು ಖಾಸಗಿ ಶಿಕ್ಷಣ ಸಂಸ್ಥೆಗಳು ತೋರಿಸುತ್ತಿರುವ ನಿರಂಕುಶ ಪ್ರವೃತ್ತಿಯನ್ನು ಎತ್ತಿ ಹೇಳಿದ್ದಾರೆ. ಅದರಲ್ಲಿಯೂ ಪ್ರಾಥಮಿಕ ಹಂತದಲ್ಲಿ ಎಳೆಯ ಮಕ್ಕಳು ತಮ್ಮ ತಮ್ಮಲ್ಲಿ ಮಾತೃಭಾಷೆಯಲ್ಲಿ ವ್ಯವಹರಿಸುವುದಕ್ಕೆ ಶಾಲಾ ಆಡಳಿತ ಮಂಡಲಿಗಳು ಶಿಕ್ಷೆ ವಿಧಿಸುತ್ತಿರುವ ವರದಿಗಳು ಸದಸ್ಯರನ್ನು ಕೆರಳಿಸಿವೆ. ಇಂಥ ಶಿಕ್ಷಣ ಸಂಸ್ಥೆಗಳಿಗೆ ನೀಡಿದ ಅನುಮತಿಯನ್ನು ರದ್ದು ಪಡಿಸಬಾರದೇಕೆ ಎಂಬ ಪ್ರಶ್ನೆಯೂ ಈ ಸಂದರ್ಭದಲ್ಲಿ ಎದ್ದಿದೆ. ಚರ್ಚೆಯ ಸಂದರ್ಭದಲ್ಲಿ ವ್ಯಕ್ತವಾಗಿರುವ ಆಕ್ರೋಶ ಕಾನೂನು ರೂಪದಲ್ಲಿ ಹೊರಹೊಮ್ಮಿಲ್ಲವಾದರೂ 'ತಮ್ಮನ್ನು ಪ್ರಶ್ನಿಸುವವರು ದೇಶದಲ್ಲಿ ಇದ್ದಾರೆ' ಎಂಬ ಸಂದೇಶ ಖಾಸಗಿ ಶಿಕ್ಷಣ ಸಂಸ್ಥೆಗಳಿಗೆ ರವಾನೆ ಆಗಿರುವುದಂತೂ ಸ್ಪಷ್ಟ.

ಹಾಗೆ ನೋಡಿದರೆ ಖಾಸಗಿ ಶಿಕ್ಷಣ ಕ್ಷೇತ್ರವನ್ನು ಕೊಬ್ಬಿಸಿದವರೇ ಜನತೆ. ಅದರಲ್ಲಿಯೂ ನಗರವಾಸಿ ಮಧ್ಯಮ ವರ್ಗದ ಜನ. ನಮ್ಮದೇ ತೆರಿಗೆ ಹಣವನ್ನು ಸರ್ಕಾರ ಪ್ರಾಥಮಿಕ ಮತ್ತು ಪ್ರೌಢ ಶಿಕ್ಷಣ ಕ್ಷೇತ್ರದ ಸುಧಾರಣೆಗೆ ಬಳಸುತ್ತಿದ್ದರೂ ನಮಗೆ ಸರ್ಕಾರದ ವ್ಯವಸ್ಥೆಯಲ್ಲಿ ಇಷ್ಟು ವರ್ಷಗಳ ನಂತರವೂ ವಿಶ್ವಾಸ ಮೂಡುತ್ತಿಲ್ಲ. ಈಚಿನ ವರ್ಷಗಳಲ್ಲಂತೂ ಕೇಂದ್ರ ಮತ್ತು ರಾಜ್ಯ ಸರ್ಕಾರಗಳು ಪ್ರಾಥಮಿಕ ಮತ್ತು ಪ್ರೌಢಶಿಕ್ಷಣ ಕ್ಷೇತ್ರಕ್ಕೆ ಉದಾರವಾಗಿ ವೆಚ್ಚ ಮಾಡುತ್ತಿವೆ. ಎಲ್ಲಿಯೇ ಇರಲಿ, ಒಂದು–ಒಂದೂವರೆ ಕಿಲೋಮೀಟರ್ ಸಮೀಪದಲ್ಲೇ ಪ್ರಾಥಮಿಕ ಶಾಲೆ ಇರುವಂತೆ ನೋಡಿಕೊಳ್ಳಲಾಗಿದೆ. ಎಲ್ಲ ಮಕ್ಕಳಿಗೆ ಉಚಿತ ಶಿಕ್ಷಣ, ಮಧ್ಯಾಹ್ನ ಉಚಿತ ಭೋಜನ, ಪಠ್ಯಪುಸ್ತಕಗಳಿಗೂ ವಿದ್ಯಾರ್ಥಿ ಹಣ ಕೊಡಬೇಕಿಲ್ಲ. ದುರ್ಬಲ ವರ್ಗದ ಮಕ್ಕಳಿಗೆ ಸಮವಸ್ತ್ರವೂ ಉಚಿತ. ಶಾಲೆಗಳಿಗೆ ವ್ಯವಸ್ಥಿತ ಕಟ್ಟಡ, ವಿದ್ಯಾರ್ಥಿಗಳ ಸಂಖ್ಯೆಗೆ ಅನುಗುಣವಾಗಿ ಶಿಕ್ಷಕರ ನೇಮಕ, ಸಂವಿಧಾನದ ಅನ್ವಯ ಮೀಸಲಾತಿ ಇದ್ದರೂ ಎಲ್ಲ ಶಿಕ್ಷಕರನ್ನೂ ಅರ್ಹತೆಯ ಆಧಾರದ ಮೇಲೆಯೇ ನೇಮಿಸಿಕೊಳ್ಳುವ ವ್ಯವಸ್ಥೆ, ಕಾಲಕಾಲಕ್ಕೆ, ಕಾಲಧರ್ಮಕ್ಕೆ ಅನುಗುಣವಾಗಿ ಪಠ್ಯಕ್ರಮಗಳ ಪರಿಷ್ಕರಣ, ಶಿಕ್ಷಕರಿಗೂ ಆಗಾಗ ವಿಶೇಷ ತರಬೇತಿ– ಇಷ್ಟಕ್ಕೆಲ್ಲ ವೆಚ್ಚವಾಗುವುದು ಸಾರ್ವಜನಿಕರ ತೆರಿಗೆಯ ಹಣ. ಆದ್ದರಿಂದ ಪ್ರತಿ ಶಾಲೆಯ ಉಸ್ತುವಾರಿಗೆ ಸ್ಥಳೀಯ ಜನಪ್ರತಿನಿಧಿಗಳು ಇರುವಂತಹ ಅಭಿವೃದ್ಧಿ ಸಮಿತಿಗಳ ರಚನೆ. ಶಾಲೆಗಳಲ್ಲಿನ ಚಟುವಟಿಕೆಗಳು ಜನತೆಯ ಕಣ್ಣೆದುರು ಅವರ ಸಕ್ರಿಯ ಪಾಲುದಾರಿಕೆಯಲ್ಲಿ ನಡೆಯಲಿ ಎಂಬ ಉದ್ದೇಶ. ಆದರೆ, ಈ ವ್ಯವಸ್ಥೆ ನಗರವಾಸಿ ಮಧ್ಯಮವರ್ಗದ ಜನತೆಯ ಗಮನ ಸೆಳೆಯುತ್ತಿಲ್ಲ. ಇದಕ್ಕೆ ಜನ ಕೊಡುವ ಕಾರಣ ಇಂಗ್ಲಿಷ್ ಕಲಿಕೆಯ ಅನಿವಾರ್ಯತೆ.

ಜನತೆಯ ಇಂಗ್ಲಿಷ್ ಮೋಹ ನಗರದ ಎಲ್ಲ ಕಡೆ ಇಂಗ್ಲಿಷ್ ಮಾಧ್ಯಮ ಶಾಲೆಗಳ ಹೆಚ್ಚಳಕ್ಕೆ ಕಾರಣ. ಈ ಮೋಹ ಈಗ ಜಿಲ್ಲಾ ಕೇಂದ್ರಗಳನ್ನೂ ದಾಟಿ ಹೋಬಳಿ ಮಟ್ಟಕ್ಕೆ ವಿಸ್ತರಿಸಿದೆ. ಇಂಗ್ಲಿಷ್‌ನಲ್ಲಿ ವ್ಯವಹರಿಸುವ ಸಾಮರ್ಥ್ಯ ಇಲ್ಲದಿದ್ದರೆ ಉದ್ಯೋಗ ಪಡೆಯುವುದೇ ಕಷ್ಟ ಎಂಬ ಮನಃಸ್ಥಿತಿ ಆಳವಾಗಿ ಬೇರು ಬಿಟ್ಟಿದೆ. ಇದನ್ನೇ ಬಂಡವಾಳ ಮಾಡಿಕೊಂಡು ಶಾಲೆಗಳನ್ನು ಆರಂಭಿಸಿದವರು ಕ್ರಮೇಣ ಯಾವ ಮಟ್ಟಕ್ಕೆ ಬೆಳೆದಿದ್ದಾರೆಂದರೆ ರಾಜ್ಯ ಸರ್ಕಾರಗಳ ಶಿಕ್ಷಣ ಇಲಾಖೆಯ ಯಾವ ನಿಯಮಗಳನ್ನೂ ಅವರು ಲಕ್ಷಿಸುವುದಿಲ್ಲ. ಕೇಂದ್ರ ಪಠ್ಯಕ್ರಮದ ಅನುಮತಿ ಪಡೆದು ಆರಂಭಗೊಂಡ ಶಾಲೆಗಳು ತಮ್ಮ ಮಟ್ಟಿಗೆ ಒಂದು ಪ್ರತ್ಯೇಕ ಸಂಸ್ಥಾನದಂತೆ ವರ್ತಿಸುತ್ತವೆ. ಶಿಸ್ತು ಹೆಚ್ಚಾದಷ್ಟೂ ಅವುಗಳಿಗೆ ಜನ ಮುಗಿಬೀಳುವ ಪರಿಸ್ಥಿತಿ ಇರುವುದರಿಂದ ಅವುಗಳು ಮಾಡಿಕೊಂಡಿರುವುದೇ ಕಾನೂನು ಎಂಬಷ್ಟರ ಮಟ್ಟಿಗೆ ನಿರಂಕುಶ ನಡವಳಿಕೆಯ ಪ್ರದರ್ಶನ ನಡೆದಿದೆ. ಅವು ವಿಧಿಸುವ ಶುಲ್ಕಕ್ಕೆ ಆಧಾರ ಏನು ಎಂಬುದನ್ನು ಪ್ರಶ್ನಿಸುವ ವ್ಯವಸ್ಥೆ ಇಲ್ಲ. ಅದೊಂದು ಖಾಸಗಿ ಉದ್ಯಮದ ಸ್ವರೂಪವನ್ನು ಪಡೆದಿರುವುದರಿಂದ ಸರ್ಕಾರದ ನಿಯಮಗಳು ಅವುಗಳಿಗೆ ಲೆಕ್ಕಕ್ಕೆ ಇಲ್ಲ.

ಈ ಸ್ಥಿತಿಯ ಬದಲಾವಣೆ ಜನರ ಕೈಯಲ್ಲಿಯೇ ಇದೆ. ಜನರಿಗೆ ಇಂಥ ದುರಹಂಕಾರಿ ಆಡಳಿತ ಇರುವ ಶಾಲೆಗಳಿಗೆ ತಮ್ಮ ಮಕ್ಕಳನ್ನು ಕಳುಹಿಸಲೇಬೇಕೆಂಬ ಬಲವಂತ ಇಲ್ಲ. ಆದರೆ, ಪ್ರತಿಷ್ಠಿತ ಶಾಲೆಗಳಲ್ಲಿ ತಮ್ಮ ಮಕ್ಕಳು ಕಲಿಯದಿದ್ದರೆ ಅವರಿಗೆ ಭವಿಷ್ಯವೇ ಇಲ್ಲ ಎಂಬ ಧೋರಣೆ ಬೆಳೆಸಿಕೊಂಡವರೇ ಹೆಚ್ಚಿನ ಸಂಖ್ಯೆಯಲ್ಲಿರುವಾಗ ಶಿಕ್ಷಣೋದ್ಯಮಿಗಳ ಅಟ್ಟಹಾಸ ನಿಲ್ಲುವುದು ಕಷ್ಟ. ಅಷ್ಟಕ್ಕೂ ಈಗಿನದು ದುಷ್ಟ ರಾಜಕಾರಣಿ, ಭ್ರಷ್ಟ ಅಧಿಕಾರಿ ಮತ್ತು ಲಾಭವೊಂದೇ ಗುರಿಯಾಗಿರುವ ಉದ್ಯಮಿಗಳ ಅಪವಿತ್ರ ಮೈತ್ರಿಯಿಂದ ರೂಪುಗೊಂಡ ಶಿಕ್ಷಣೋದ್ಯಮ. ಇದನ್ನು ಸಾರ್ವಜನಿಕ ಶಿಕ್ಷಣ ವ್ಯವಸ್ಥೆ ಬಗೆಗಿನ ನಂಬಿಕೆ, ವಿಶ್ವಾಸ ಮತ್ತು ಪಾಲುದಾರಿಕೆಯಲ್ಲಿ ಎದುರಿಸುವುದು ಸಾಧ್ಯ. ಜನತೆಯಲ್ಲಿ ಇಂತಹ ಸುಧಾರಣೆಯಾಗದೆ ಖಾಸಗಿ ಶಿಕ್ಷಣ ಸಂಸ್ಥೆಗಳ ನಿರಂಕುಶ ನಡೆ ನಿಯಂತ್ರಣಕ್ಕೆ ಬರಲಾರದು.

■ ಲಕ್ಷ್ಮಣ ಕೊಡಸೆ




